**1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ**

**OS**-180/2023 **DW**-1

**ದಿಃ 15.10.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ಶ್ರೀಮತಿ ಜೆ ಪಿ ಡಿ ವಕೀಲರಿಂದಃ**

1. ನನಗೆ 76 ವರ್ಷ ವಯಸ್ಸು ಆಗಿರುತ್ತದೆ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿರುವ ಮಾಹಿತಿಯನ್ನು ನಾನೇ ನನ್ನ ವಕೀಲರಿಗೆ ನೀಡಿರುತ್ತೇನೆ. ನಮ್ಮ ಮನೆತನಕ್ಕೆ ಎರಡು ಆಸ್ತಿಗಳು ಇರುತ್ತವೆ. ನಮ್ಮ ಆಸ್ತಿಗಳ ನಂಬರ 2671/1, 2672 ಆಗಿರುತ್ತವೆ. ಸಿಟಿಎಸ್ ನಂಃ2671 ನ್ನು ನನ್ನ ತಂದೆಯವರು ಖರೀದಿ ಮಾಡಿರುತ್ತಾರೆ. ಅದರ ಪ್ರತಿ ನನ್ನ ಬಳಿ ಇದ್ದು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಸದರಿ ಕಾಗದ ಪತ್ರ ಯಾವದು ಎಂದು ಅವರು ಹಾಜರುಪಡಿಸಿರುವ ದಾಖಲೆಗಳನ್ನು ತೋರಿಸಿ ಕೇಳಲಾಗಿ ಸಾಕ್ಷಿಯು ದಾಖಲೆಗಳನ್ನು ನೋಡಿ ನನಗೆ ತಿಳಿಯುತ್ತಿಲ್ಲ ಎಂದು ನುಡಿಯುತ್ತಾರೆ. ಸಿಟಿಎಸ್ ನಂಃ2671 ರ ಹಕ್ಕು ಬದಲಾವಣೆ ವಹಿಯನ್ನು ನೋಡಿರುತ್ತೇನೆ. ಸದರಿ ಉತಾರದಲ್ಲಿ ಯಾರಿಂದ ಯಾರ ಹೆಸರಿಗೆ ಬಂದಿರುತ್ತದೆಂದರೆ ಸಾಕ್ಷಿಯು ಶಿವಪ್ಪ ರಾಚಪ್ಪ ಮುಳಮುತ್ತಲ ರವರಿಂದ ನನ್ನ ಹೆಸರಿಗೆ ಬಂದಿರುತ್ತದೆಂದು ನುಡಿಯುತ್ತಾರೆ. ಶಿವಪ್ಪ ಮುಳಮುತ್ತಲ ರವರು ಜವಳಿ ವ್ಯಾಪಾರದಿಂದ ಸಿಟಿಎಸ್ ನಂಃ2671 ನ್ನು ಖರೀದಿ ಮಾಡಿರುತ್ತಾರೆ. ತಾವು ಖರೀದಿ ಪತ್ರ ಮತ್ತು ಹಕ್ಕು ಬದಲಾವಣೆ ವಹಿಯನ್ನು ಹಾಜರುಪಡಿಸದ ಕಾರಣ ತಮಗೆ ಈ ಬಗ್ಗೆ ಯಾವದೇ ಮಾಹಿತಿ ಇರದಿದ್ದರೂ ಸುಳ್ಳು ಹೇಳುತಿದ್ದೀರಿ ಎಂದರೆ ಸರಿಯಲ್ಲ.

2. ಸಿಟಿಎಸ್ ನಂಃ2672 ನ್ನು ನನ್ನ ತಂದೆಯವರು ಖರೀದಿ ಮಾಡಿರುತ್ತಾರೆ. ಇದು ತಮ್ಮ ತಂದೆಯವರ ಸ್ವಯಾರ್ಜಿತ ಆಸ್ತಿ ಎಂದರೆ ಸರಿ. ಸದರಿ ಆಸ್ತಿಯನ್ನು ನನ್ನ ತಂದೆಯವರು ನನ್ನ ಅಣ್ಣನ ಮಗ ವಿಶ್ವನಾಥ ಚನ್ನಮಲ್ಲಪ್ಪ ಮುಳಮುತ್ತಲ ರವರಿಗೆ ವರ್ಗಾಯಿಸಿದ್ದು ಅವರಿಂದ ನನ್ನ ಹೆಸರಿಗೆ ವರ್ಗಾವಣೆಯಾಗಿರುತ್ತದೆ. ಸಿಟಿಎಸ್ ನಂಃ2672 ರ ಹಕ್ಕು ಬದಲಾವಣೆ ವಹಿ ಮತ್ತು ಆಸ್ತಿ ಉತಾರವನ್ನು ಹಾಜರುಪಡಿಸಿರಬಹುದು. ತಮ್ಮ ತಂದೆಯವರು ಸಿಟಿಎಸ್ ನಂಃ2672 ನ್ನು ವಾದಿ ಮತ್ತು ತಮ್ಮ ಅಣ್ಣನ ಮಗ ವಿಶ್ವನಾಥ ಮುಳಮುತ್ತಲರವರಿಗೆ ದಾನ ಮಾಡಿದ್ದರು ಎಂದರೆ ಸರಿ. 1980 ರಲ್ಲಿ ದಾಖಲಾದಂತಹ ಹೆಸರುಗಳು ಅಂದರೆ ನಿಮ್ಮ ಅಣ್ಣನ ಮಗ ಹಾಗೂ ತಮ್ಮ ಮಗನ ಹೆಸರಿನಲ್ಲಿ ಇರುವ ದಾಖಲೆಗಳು ಇಲ್ಲಿಯವರೆಗೂ ಮುಂದುವರೆದಿವೆ ಎಂದರೆ ಸರಿ. ತಮ್ಮ ಅಣ್ಣನ ಮಗ ಅಂದರೆ ವಿಶ್ವನಾಥ ರವರು ಅವರ ಅರ್ಧ

ಹಿಸ್ಸೇಯನ್ನು ನಿಮ್ಮ ಮಗನ ಹೆಸರಿಗೆ ಹಕ್ಕು ಬಿಟ್ಟುಕೊಟ್ಟಿರುತ್ತಾರೆಂದರೆ ಸರಿ. ಆದ ಕಾರಣ ತಮ್ಮ ಮಗ ಅಂದರೆ ವಾದಿಯು ಸಿಟಿಎಸ್ ನಂಃ2672 ಕ್ಕೇ ಸಂಪೂರ್ಣ ಮಾಲೀಕರಾಗಿದ್ದು ಅವರ ಹೆಸರು ಉತಾರದಲ್ಲಿ ಬರುತ್ತದೆ ಎಂದರೆ ಸಾಕ್ಷಿಯು ಬರುತ್ತಿದೆ ಆದರೆ ನನಗೂ ಅದರಲ್ಲಿ ಅರ್ದ ಹಿಸ್ಸೇ ಇರುತ್ತದೆ ಎನ್ನುತ್ತಾರೆ. ಸಿಟಿಎಸ್ ನಂಃ2672/ಬಿ ಆಸ್ತಿಯಲ್ಲಿ ತಮಗೆ ಯಾವದೇ ರೀತಿಯ ಹಕ್ಕು ಇಲ್ಲ ಎಂದರೆ ಸರಿಯಲ್ಲ.

3. ಸಿಟಿಎಸ್ ನಂಃ2671 ಆಸ್ತಿಯು ತಮ್ಮ ಅಜ್ಜನವರ ಕಡೆಯಿಂದ ಬಂದಂತಹ ಆಸ್ತಿ ಎಂದರೆ ಸರಿ. ತಮ್ಮ ಅಜ್ಜ ಅಂದರೆ ರಾಚಪ್ಪ ಮುಳಮುತ್ತಲ ಎಂದರೆ ಸರಿ. ಅವರಿಂದ ಅವರ ಮಗನಾದ ಶಿವಪ್ಪ ಮುಳಮುತ್ತಲ ರವರಿಗೆ ಬಂದಿರುತ್ತದೆಂದರೆ ಸರಿ. ನನ್ನ ತಂದೆಯಿಂದ ನನಗೆ ಮತ್ತು ನನ್ನ ಅಣ್ಣನಾದ ಚನ್ನಮಲ್ಲಪ್ಪ ರವರ ಹೆಸರಿಗೆ ಬಂದಿರುತ್ತದೆಂದರೆ ಸರಿ. ಸದರಿ ಆಸ್ತಿಯನ್ನು ನಾನು ಮತ್ತು ನನ್ನ ಅಣ್ಣ ಉಪವಿಭಾಗ ಮಾಡಿಕೊಂಡಿರುತ್ತೇವೆಂದರೆ ಸರಿ. ಈ ರೀತಿ ಪೋಡಿಯಾದ ನಂತರ ಸದರಿ ನಂಬರ 2671/1 ಮತ್ತು 2671/2 ಎಂದು ಆಗಿರುತ್ತವೆಂದರೆ ಸರಿ. ನನ್ನ ಹಿಸ್ಸೆಗೆ ಬಂದ ಆಸ್ತಿಯು ಸಿಟಿಎಸ್ ನಂಃ2671/1 ಆಗಿರುತ್ತದೆಂದರೆ ಸರಿ. ನನ್ನ ಹಿಸ್ಸೇಗೆ ಬಂದ ಆಸ್ತಿಯ ವಿಸ್ತೀರ್ಣ ಎಷ್ಟು ಎಂಬುದು ಗೊತ್ತಿಲ್ಲ. ನನಗೆ ಇಬ್ಬರು ಮಕ್ಕಳಿದ್ದು ಅವರು ಈ ಪ್ರಕರಣದಲ್ಲಿ ವಾದಿ ಮತ್ತು 2 ನೇ ಪ್ರತಿವಾದಿಯಾಗಿರುತ್ತಾರೆ. ನನಗೆ ಹೆಣ್ಣು ಮಕ್ಕಳು ಇರುವದಿಲ್ಲ. ನನ್ನ ಅಜ್ಜನಿಂದ ಬಂದಂತಹ ಆಸ್ತಿಗೆ ನಾನು ಮತ್ತು ನನ್ನ ಇಬ್ಬರು ಮಕ್ಕಳು ಹಿಸ್ಸೇದಾರರು ಆಗಿರುತ್ತೀರಿ ಎಂದರೆ ಸರಿ. ನಾನು ಬೈಲಹೊಂಗಲ ಅರ್ಬನ ಕೋ-ಆಪ್ ಬ್ಯಾಂಕ ಲಿ ಹುಬ್ಬಳ್ಳಿಯಲ್ಲಿ ಸಾಲ ಮಾಡಿರುತ್ತೀರಿ ಎಂದರೆ ಸರಿ. ಸಾಕ್ಷಿ ಮುಂದುವರೆದು ಅವನ ಸಲುವಾಗಿ ಅಂದರೆ ವಾದಿಯ ಸಲುವಾಗಿ ಸಾಲ ಮಾಡಿರುತ್ತೇನೆ ಎನ್ನುತ್ತಾರೆ. ಸಾಲ ಮಾಡಿದಾಗ ನಾನು ಮತ್ತು ನನ್ನ ಮಕ್ಕಳು ಒಟ್ಟಾಗಿ ಇದ್ದೆವು. ಸದರಿ ಸಾಲವನ್ನು ನಾನು ತೀರುವಳಿ ಮಾಡಿರುವದಿಲ್ಲ ಅದನ್ನು ವಾದಿಯು ತೀರುವಳಿ ಮಾಡಬೇಕಾಗುತ್ತದೆ. ಈ ರೀತಿ ಸಾಲ ತೀರವಳಿ ಮಾಡಲು ಆಗದ ಕಾರಣ ಅದನ್ನು ಕರ್ನಾಟಕ ಬ್ಯಾಂಕಗೆ ಟೇಕ ಓವರ ಮಾಡಿರುತ್ತೀರಿ ಎಂದರೆ ಸರಿ. ಸದರಿ ಸಾಲವನ್ನು ಸಹ ನಾನು ತೀರುವಳಿ ಮಾಡಿರುವದಿಲ್ಲ. ಅದನ್ನು ವಾದಿಯು ತೀರುವಳಿ ಮಾಡಬೇಕಾಗುತ್ತದೆ.

4. 3 ನೇ ಪ್ರತಿವಾದಿಯು ನನ್ನ ಸೊಸೆಯ ಅಣ್ಣ ಆಗಿರುತ್ತಾರೆ. ನನಗೆ ಸಂಬಂದದಲ್ಲಿ ಬೀಗರಾಗುತ್ತಾರೆ. ನನಗೆ ಹಿಂದೆ ನಡೆದ ಪ್ರಕರಣಗಳ ಬಗ್ಗೆ ಮಾಹಿತಿ ಇರುತ್ತದೆ. ಒ ಎಸ್ ನಂಃ129/2007 ನ್ನು ಈ ಪ್ರಸ್ತುತ ಪ್ರಕರಣದ 2 ನೇ ಪ್ರತಿವಾದಿಯು ಮಾಡಿದ್ದರು. ಸದರಿ ದಾವೆಯನ್ನು ತನಗೂ ಹಕ್ಕು ಇದೆ ಎಂದು ಹೇಳಿ ಮಾಡಿದ್ದ. ಸದರಿ ದಾವೆಯನ್ನು ಆತನ ಸಹೋದರನಾದ ಅರುಣ ರವರ ಮೇಲೆ ಮಾಡಿದ್ದ. ತಮಗೆ ಈ ಪ್ರಕರಣದ ಬಗ್ಗೆ ಯಾವದೇ ರೀತಿಯ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ಈ ದಾವೆಯಲ್ಲಿ

ಕರ್ನಾಟಕ ಬ್ಯಾಂಕನ್ನು 3 ನೇ ಪ್ರತಿವಾದಿಯಾಗಿ ಮಾಡಲಾಗಿರುತ್ತದೆಂದರೆ ಸಾಕ್ಷಿಯು ಇಲ್ಲ ಎನ್ನುತ್ತಾರೆ. ಸದರಿ ದಾವೆಯು ವಜಾ ಆಗಿರುತ್ತದೆಂದರೆ ಸರಿ.

5. ಇದರ ನಂತರ ಅಸಲು ದಾವಾ ನಂಃ157/2008 ನ್ನು ಪ್ರಧಾನ ಸಿವಿಲ್ ನ್ಯಾಯಾಲಯ ಹುಬ್ಬಳ್ಳಿಯಲ್ಲಿ ದಾಖಲು ಮಾಡಲಾಗಿತ್ತು ಎಂದರೆ ಸರಿ. ಅದನ್ನು ಸಹ ಕಿರಣ ಮುಳಮುತ್ತಲ ರವರು ಅರುಣ ಮುಳಮುತ್ತಲ ರವರ ಮೇಲೆ ಮಾಡಿರುತ್ತಾರೆ. ಈ ದಾವೆಯ ಬಗ್ಗೆ ತಮಗೆ ಯಾವದೇ ಮಾಹಿತಿ ಇರದಿದ್ದರೂ ಅದನ್ನು ಹಾಜರುಪಡಿಸಿರುತ್ತೀರಿ ಎಂದರೆ ಸರಿಯಲ್ಲ. ಅಸಲು ದಾವಾ ನಂಃ157/2008 ನ್ನು ತಮ್ಮ ಹೆಂಡತಿ ದಾಖಲಿಸಿದ್ದರು ಎಂದರೆ ಸರಿ. ಅದರಲ್ಲಿ ಬ್ಯಾಂಕ ಮತ್ತು ಇತರೆ ವ್ಯಕ್ತಿಗಳನ್ನು ಪಕ್ಷಗಾರರಾಗಿ ಮಾಡಲಾಗಿತ್ತು ಎಂದರೆ ಸರಿ. ಆ ದಾವೆಯು ಮದ್ಯಂತರ ಅರ್ಜಿಯ ಆದೇಶದ ಮೇಲೆ ವಜಾ ಆಗಿತ್ತು ಎಂದರೆ ಸರಿ. ತಾವು 3 ನೇ ಪ್ರತಿವಾದಿ ಹೆಸರಿಗೆ ಸಿಟಿಎಸ್ ನಂಃ2671/1 ಕ್ಕೆ ಸಂಬಂದಿಸಿದಂತೆ ಖರೀದಿ ಪತ್ರವನ್ನು ಮಾಡಿಕೊಟ್ಟಿರುತ್ತೀರಿ ಎಂದರೆ ಸರಿ. ಸಾಕ್ಷಿ ಮುಂದುವರೆದು ಬ್ಯಾಂಕನ ಸಾಲ ತೀರಿಸಿದ ಕಾರಣ ಮಾಡಿಕೊಟ್ಟಿರುತ್ತೇನೆಂದು ನುಡಿಯುತ್ತಾರೆ. 3 ನೇ ಪ್ರತಿವಾದಿಯು ಯಾವದೇ ರೀತಿಯಾಗಿ ಬ್ಯಾಂಕನ ಸಾಲ ತೀರುವಳಿ ಮಾಡಿರುತ್ತಾರೆಂದರೆ ಸರಿಯಲ್ಲ. ಬ್ಯಾಂಕನ ಸಾಲ ತೀರಿಸಿದ ಬಗ್ಗೆಯಾವದೇ ಕಾಗದ ಪತ್ರ ಹಾಜರುಪಡಿಸಿಲ್ಲ.

(ಈ ಸಂದರ್ಬದಲ್ಲಿ ವಾದಿ ಪರ ವಕೀಲರು ಹೆಚ್ಚಿನ ಪಾಟೀ ಸವಾಲಗೆ ಒಳಪಡಿಸಲು ಕೆಲವುಂದು ದಾಖಲೆಗಳು ಅಗತ್ಯಇದ್ದು ಕಾಲಾವಕಾಶ ಕೋರಿದ್ದು ಸಮಯಾವಕಾಶ ನೀಡಲಾಯಿತು.)

(ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

**1 ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ.**